# ಸೂಕ್ಷ್ಮ ಸಂವೇದಿ ಪದಾರ್ಥಗಳ ಆಮದಿನಲ್ಲಿ ಇಳಿಕೆ

ನವದೆಹಲಿ, ಅಕ್ಟೋಬರ್ 06 2005

ಏಪ್ರಿಲ್ 2005 ರಿಂದ ಜುಲೈ 2005 ರ ನಡುವಿನ ಅವಧಿಯಲ್ಲಿ ಸೂಕ್ಷ್ಮ ಸಂವೇದಿ ಪದಾರ್ಥಗಳ ಒಟ್ಟು ಆಮದು 4864 ಕೋಟಿ ರೂಪಾಯಿಗಳು. ಕಳೆದ ವರ್ಷದ ಇದೇ ಅವಧಿಯಲ್ಲಿ ಈ ಪ್ರಮಾಣ 5143 ಕೋಟಿ ರೂಪಾಯಿಗಳಾಗಿತ್ತು. ಹೀಗಾಗಿ ಸೂಕ್ಷ್ಮ ಸಂವೇದಿ ಪದಾರ್ಥಗಳ ಆಮದಿನಲ್ಲಿ ಶೆ. 5.4 ರ ಇಳಿಕೆ ಕಂಡು ಬಂದಿದೆ.

ಇದೇ ಅವಧಿಯಲ್ಲಿ ಒಟ್ಟಾರೆ ಆಮದು 18,3537 ಕೋಟಿ ರೂ. ಆಗಿದ್ದು, ಕಳೆದ ವರ್ಷ ಇದೇ ಅವಧಿಯಲ್ಲಿ ಅದು 13,9634 ಕೋಟಿ ರೂ. ಆಗಿತ್ತು.

ಖಾದ್ಯ ತೈಲ, ಕ್ಷೀರ, ಕ್ಷೀರೋತ್ಪನ್ನ ಮತ್ತು ರಬ್ಬರ್ ಆಮದಿನಲ್ಲಿ ಈ ಅವಧಿಯಲ್ಲಿ ಇಳಿಕೆ ಆಗಿದೆ. ಆದರೆ ಹಣ್ಣು, ತರಕಾರಿ, ಹತ್ತಿ ಮತ್ತು ರೇಷ್ಮೆ, ಸಾಂಬಾರ, ಯಂತ್ರೋಪಕರಣ, ಅಮೃತಶಿಲೆ, ಗ್ರಾನೇಟ್, ಟೀ ಮತ್ತು ಕಾಫಿ, ಎಸ್‌ಎಸ್‌ಐ ಮತ್ತಿತರ ವಸ್ತುಗಳಲ್ಲಿ ಏರಿಕೆ ಆಗಿದೆ.

ಖಾದ್ಯ ತೈಲ ವಿಭಾಗದಲ್ಲಿ ಆಮದು ಕಳೆದ ವರ್ಷದ 3327.86 ಕೋಟಿ ರೂ. ಗಳಿಂದ ಈ ವರ್ಷದ ಅದೇ ಅವಧಿಯಲ್ಲಿ 2381.67 ಕೋಟಿ ರೂ. ಗಳಿಗೆ ಇಳಿದಿದೆ. ಕಚ್ಚಾ ತೈಲದ ಆಮದು ಶೇ.4.6 ರಷ್ಟು ಏರಿದೆ. ಆದರೆ ರೀಫೈನ್ಡ್ ಆಯಿಲ್‌ನಲ್ಲಿ ಶೇ. 73ರಷ್ಟು ಇಳಿಕೆ ಆಗಿದೆ. ಆರ್‌ಬಿಡಿ ಪಾಮೊಲಿನ್ ಭಾರಿ ಕೊರತೆ ಇದಕ್ಕೆ ಕಾರಣವಾಗಿದೆ.

ಬ್ರೆಜಿಲ್, ಚೀನಾ, ಅಮೆರಿಕಾ, ಈಜಿಪ್ಟ್, ಘಾನಾ, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ವಿಯೆಟ್ನಾಂ, ಜರ್ಮನಿ, ನೈಜೀರಿಯಾ ಮೊದಲಾದ ದೇಶಗಳಿಂದ ತರಿಸಿಕೊಳ್ಳುತ್ತಿದ್ದ ಸೂಕ್ಷ್ಮ ಸಂವೇದಿ ವಸ್ತುಗಳ ಆಮದಿನಲ್ಲಿ ಏರಿಕೆ ಆಗಿದ್ದು, ಇಂಡೋನೇಷಿಯಾ, ಅರ್ಜಂಟೀನಾ, ಮಲೇಶಿಯಾ, ಜಪಾನ್ ಮತ್ತು ಥೈಲ್ಯಾಂಡ್ ಮತ್ತಿತರ ದೇಶದ ಆಮದಿನಲ್ಲಿ ಇಳಿಕೆ ಆಗಿದೆ.